'ಹ್ಹಹ್ಹಹ್ಹಾ....' ಕೇಕೆ ಹಾಕಿದ ಒಬ್ಬ ಧಾಂಡಿಗ 'ಇಷ್ಟು ಹೊತ್ತಿನಲ್ಲಿ ಯಾಕೆ ಬರ್ತೀವಿ ನಾವು? ನಮಗೆ ಹಣ ಬೇಕು ಅಷ್ಟೆ. ನಿಮ್ಮೊಡನೆ ಇರುವ ಕ್ಯಾಷ್, ಒಡವೆ ಎಲ್ಲಾ ಕೊಡಿ. ತಗೊಂಡು ಹೊರಟು ಹೋಗ್ತೀವಿ.'

'ಯಾಕೆ ಕೊಡಬೇಕು ನಿಮಗೆ ನಾವು ಕಷ್ಟಪಟ್ಟು ಸಂಪಾದಿಸಿದ್ದನ್ನ?' ರೋಷದಲ್ಲಿ ಸದಾನಂದನ ಶರೀರ ಕಂಪಿಸುತ್ತಿತ್ತು. ಭಯಭೀತಳಾಗಿದ್ದ ಗಾಯತ್ರಿಯ ಬಾಯಿಂದ ಮಾತೇ ಹೊರಡದು.

'ಒಳ್ಳೆ ಮಾತಲ್ಲಿ ಹೇಳ್ತೀವಿ ಸಾರ್, ನಿಮ್ಮಲ್ಲಿ ಇರೋದನ್ನ ಕೊಡಿ. ನಿಮಗೇನೂ ತೊಂದರೆ ಮಾಡದೆ ಹೊರಟುಬಿಡ್ತೀವಿ.'

'ನಮ್ಮತ್ರ ಏನೂ ಇಲ್ಲಪ್ಪ. ಹೇಳಿ ಕೇಳಿ ಸಾಮಾನ್ಯ ಉದ್ಯೋಗಿ ನಾನು.'

'ಹಾಗೆ ಹೇಳಿದ್ರೆ ನಂಬ್ತೀವಾ ನಾವು? ಇಷ್ಟು ದೊಡ್ಡ ಮನೆ ಮಾಡ್ಕೊಂಡಿದ್ದೀರಾ? ಮಗ ಸೊಸೆ ಫಾರಿನ್ನಲ್ಲಿದ್ದಾರೆ! ಡಾಲರ್ಸ್ ಕಳಿಸ್ತಾರೆ! ಬೇಗ, ಬೇಗ, ಬಾಗಿಲು ತೆರೀರಿ ಸಾಕು'

ಅವರು ಪಟ್ಟು ಬಿಡುವ ಹಾಗೆ ಕಾಣುತ್ತಿಲ್ಲ. ಗಾಯತ್ರಿ ಮೆತ್ತಗೆ ಸದಾನಂದನ ಬಳಿ ನುಡಿದಳು 'ನೀವು ಪೊಲೀಸಿಗೆ ಫೋನ್ ಮಾಡಿ.'

ಹೊರಗೆ ಇದ್ದವರಲ್ಲಿ ಒಬ್ಬನಿಗೆ ಅದು ಕೇಳಿಸಿತು. ಅವನೆಂದ 'ಪೊಲೀಸ್ ಗಿಲೀಸ್ ಅಂತ ಮಾತಾಡಿದ್ರೆ ನಿಮ್ಮ ಫೋನ್ ಲೈನನ್ನೇ ಕಟ್ ಮಾಡಿಬಿಡ್ತೀವಿ.'

'ಇಲ್ಲಪ್ಪ, ನಾವು ಪೊಲೀಸಿಗೆ ಫೋನ್ ಮಾಡಲ್ಲ. ನೀವು ಬಂದ ಹಾಗೇ ಹಿಂದಕ್ಕೆ ಹೋಗಿ ತೆಪ್ಪಗೆ' ಹಾಗಂದುಕೊಂಡೇ ಸದಾನಂದ ಮೆಲ್ಲಗೆ ರಿಸೀವರ್ ಎತ್ತಿ ಡಯಲ್ ಮಾಡಿದ 'ಹಲೋ ರವೀ, ನಮ್ಮ ಮನೆಗೊಮ್ಮೆ ಈಗಲೇ ಬರ್ತೀರಾ.... ಹಲೋ.... ಹಲೋ....' ರಿಸೀವರ್ ಇಟ್ಟುಬಿಟ್ಟ.

ಇವರ ಮನೆಯಿಂದ ಅರ್ಧ ಕಿ.ಮೀ. ದೂರದಲ್ಲಿ ರವಿಯ ದಿನಸಿ ಅಂಗಡಿ ಇದೆ. ಸದಾನಂದ ಮನೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಅಲ್ಲಿಂದಲೇ ತರಿಸುವುದು. ದಿನಾ ವಾಕ್ ಹೋಗುವಾಗಲೂ ರವಿಯನ್ನು ಮಾತಾಡಿಸಿಯೇ ಬರುವ ಪದ್ಧತಿ. ಅಂಗಡಿಯ ಹಿಂದೆಯೇ ರವಿಯ ಮನೆ. ಇಲ್ಲಿ ಹತ್ತಿರ ಇರುವ ಆತ್ಮೀಯ ವ್ಯಕ್ತಿ ರವಿ ಮಾತ್ರ. ಫೋನ್ ಮಾಡಲೆಂದು ನೋಡಿದರೆ ಕಟ್ ಆಗಿ ಹೋಯಿತು, ಛೇ. ಸದಾನಂದ ಕೈ ಹಿಸುಕಿಕೊಂಡ.

'ಯಾರಿಗೂ ಫೋನ್ ಮಾಡಬೇಡಿ ಅಂದ್ನಲ್ಲಾ? ಮತ್ಯಾಕೆ ಮಾಡಕ್ಕೆ ಹೊರಟಿದ್ದು? ವೈರ್ ಕತ್ತರಿಸಿ ಹಾಕಿದ್ದೀನಿ. ಇನ್ನು ಈ ರಾತ್ರೀಲಿ ನಿಮ್ಮನ್ನು ಕಾಪಾಡೋರು ಯಾರೂ ಇಲ್ಲ. ಬೇಗ ಬಾಗಿಲು ತೆಗೀರಿ. ನಮಗೆ ಬೇಕಾಗಿರೋದನ್ನ ಎತ್ಕೊಂಡು ಹೋಗ್ತೀವಿ. ಬಾಗಿಲು ತೆಗೀದೆ ಇದ್ರೆ ಮಾತ್ರ, ಹೇಗೋ ಒಳಬಂದು ನಿಮ್ಗೊಂದು ಗತಿ ಕಾಣಿಸ್ತೀವಿ'.

ಬಾಗಿಲು ಬಡಿಯುವ ಸದ್ದು ಇನ್ನೂ ಜೋರಾಯಿತು. ಅಷ್ಟರಲ್ಲಿ ಗೇಟಿನ ಬೀಗ ಜಜ್ಜಿ ಒಡೆದು ಗೇಟು ತೆರೆದು ಇನ್ನಿಬ್ಬರೂ ಒಳಬಂದರು. ಕೈಯಲ್ಲಿರುವ ಆಯುಧಗಳಿಂದ ಕಿಟಕಿಯ ಗಾಜುಗಳನ್ನು ಠಳ್ ಎಂದು ಬಡಿದು ಪುಡಿ ಮಾಡಿದರು. ಗಾಯತ್ರಿ ಥರ ಥರ ನಡುಗಿದಳು. ಮನಸ್ಸಿನಲ್ಲಿ ಭಯವಿದ್ದರೂ ಸಾಂತ್ವನದ ದನಿಯಲ್ಲಿ ಸದಾನಂದ ನುಡಿದ 'ಗಾಯತ್ರೀ, ಈ ಕಳ್ಳರು ಒಳ ನುಗ್ಗಲು ಇನ್ನು ಹೆಚ್ಚು ಹೊತ್ತಿಲ್ಲ. ದೇವರೇ ನಮ್ಮನ್ನು ಕಾಪಾಡಬೇಕಷ್ಟೆ.'

'ಅದೇ, ಕಿಟಕಿಯ ಸರಳುಗಳನ್ನು ಬಗ್ಗಿಸಲು ನೋಡುತ್ತಾ ಇದ್ದಾರೆ. ಅಷ್ಟಾದರೆ ಅವರಿಗೆ ಒಳಬರಲು ಕಷ್ಟವಿಲ್ಲ. ನಮ್ಮಲ್ಲಿರುವ ದುಡ್ಡು ಒಡವೆ ಅವರಿಗೆ ಕೊಟ್ಟುಬಿಡೋಣವೇ? ತೊಲಗಲಿ ಆಚೆಗೆ.'

'ಬೇಡ ಬೇಡ, ಈಗ ನಾವು ಇರೋದನ್ನು ತಗೊಂಡು ಉಗ್ರಾಣದಲ್ಲಿ ಅವಿತುಕೊಳ್ಳೋಣ.'

ಇಬ್ಬರೂ ಬೀರು ತೆರೆದು ಒಳಗಿರುವ ಚಿನ್ನ ಮತ್ತು ನಗದು ಹಣ ಹೊರತೆಗೆದರು. ಅಡಿಗೆ ಮನೆಯೊಳಗೆ ಒಂದು ಮೂಲೆಯಲ್ಲಿ ದಿನಸಿ ಸಾಮಾನುಗಳನ್ನಿಡಲು ಚಿಕ್ಕ ಸ್ಟೋರು ಕೋಣೆಯಿದೆ. ಹೊರಗಿಂದ ಥಟ್ಟನೆ ಯಾರಿಗೂ ಕಾಣುವ ಹಾಗಿಲ್ಲ. ಇಬ್ಬರೂ ಅದರೊಳಗೆ ಸೇರಿ ಬಾಗಿಲು ಹಾಕಿ 'ಭಗವಂತಾ, ನಮ್ಮನ್ನು ಕಾಪಾಡು' ಎಂದು ದೇವರಿಗೆ ಮೊರೆ ಇಟ್ಟರು.

ಹೊರಗೆ ಬಾಗಿಲು ಬಡಿಯುವುದೋ, ಒಡೆಯುವುದೋ ಏನೋ ಆಗುತ್ತಾ ಇತ್ತು.... ಎಲ್ಲಾ ದೇವರ ಮೇಲೆ ಭಾರ ಹಾಕಿ, ಕಣ್ಣು ಮುಚ್ಚಿ ಧ್ಯಾನದಲ್ಲಿ ಮುಳುಗಿದರು ದಂಪತಿ. ಸ್ವಲ್ಪ ಹೊತ್ತು ಈ ಸ್ಥಿತಿಯಲ್ಲೇ ಕಳೆಯಿತು....

'ಎಂಥ ಅವಸ್ಥೆ ಬಂತು ನಮಗೆ. ಕಷ್ಟಪಟ್ಟು ದುಡಿದು ಸಂಪಾದಿಸಿದ ಹಣದಿಂದ ಆಸ್ತಿ ಮನೆ ಮಾಡಿಕೊಂಡ್ವಿ. ಮಗನನ್ನು ಓದಿಸಿ ಮದುವೆ ಮಾಡಿಸಿ ಮೊಮ್ಮಗನ ಕನಸು ಕಂಡ್ವಿ. ಆದರೆ ಈಗ ನಮಗೆ ಯಾರೂ ಇಲ್ಲ. ನಮ್ಮನ್ನೀಗ ಕೊಚ್ಚಿಕೊಂದರೂ ಕೇಳುವವರಿಲ್ಲ' ಸದಾನಂದನ ಕಣ್ಣುಗಳು ತೇವವಾದುವು. ಗಾಯತ್ರಿಯ ಕಪೋಲಗಳು ಕಣ್ಣೀರಲ್ಲಿ ಮೀಯುತ್ತಿದ್ದವು. ಅವಳು ಉದ್ವೇಗದಿಂದ ಕಂಗೆಟ್ಟಿದ್ದಳು.

'ನಾನು ಬಡ್ಕೊಂಡೆ ಈ ನಿರ್ಜನ ಪ್ರದೇಶದಲ್ಲಿ ಮನೆ ಕಟ್ಟಿಸೋದು ಬೇಡಾಂತ. ನೀವೆಲ್ಲಿ ಕೇಳ್ತೀರಿ ನನ್ನ ಮಾತು! ಇನ್ನು ಬಂದದ್ದನ್ನು ಎದುರಿಸೋದೊಂದೇ ಇರುವುದು.'

ಮತ್ತೆಷ್ಟೋ ಸಮಯ ಜಾರಿತು. ಈಗ ಬಾಗಿಲು ಮೆತ್ತಗೆ ತಟ್ಟಿದಂತೆ ಕೇಳಿಸಿತು. ಒಂದು ಕಾರೋ, ಜೀಪೋ ಬಂದು ಸ್ವಲ್ಪ ಹೊತ್ತು ನಿಂತು ಹೋದ ಶಬ್ದ. 'ಅಮ್ಮಾ ಅಪ್ಪಾ, ಬಾಗಿಲು ತೆಗೀರಿ' ಯಾರೋ ಕೂಗಿದ ಧ್ವನಿ. ಗಾಯತ್ರಿ ಪಿಸುಗುಟ್ಟಿದಳು

'ಯಾರದು? ಗಿರೀಶನ ಸ್ವರದ ಹಾಗೆ ಕೇಳಿಸ್ತಾ ಇದೆಯಲ್ಲ. ನಾವೇನೂ ಕನಸು ಕಾಣ್ತೆಲ್ಲ ತಾನೇ?'

'ಗಿರೀಶ ಹೇಗೆ ಬರಲು ಸಾಧ್ಯ ಈಗ? ಸದ್ಯಕ್ಕೆ ಬರೋದಿಲ್ಲ ಅಂತ ಫೋನ್ ಮಾಡಿದ್ದನಲ್ಲ? ಕಳ್ಳರು ಗಿರೀಶನ ಸ್ವರವನ್ನು ಅನುಕರಣೆ ಮಾಡ್ತಾ ಇರಬಹುದೆ?'

'ರೀ, ಕಿವಿ ಕೊಟ್ಟು ಕೇಳಿ, ಪುನಃ ಗಿರೀಶ ಕರಿಯೋ ಹಾಗೇ ಕೇಳಿಸ್ತಾ ಇದೆ. ಏನು ಮಾಡೋಣ ನಾವು?'

'ಧೈರ್ಯ ಮಾಡಿ ಹೊರಗೆ ಹೋಗೋಣ. ಬೇರೆ ಸದ್ದೆಲ್ಲ ಅಡಗಿದೆ ಈಗ.'

ಸ್ಟೋರ್ ಕೋಣೆಯಿಂದ ಹೊರಬಂದರೆ, ಮನೆ ಬಾಗಿಲು ಹಾಕಿದ ಹಾಗೇ ಇದೆ! ಕಿಟಕಿಯ ಸರಳುಗಳು ತುಂಡರಿಸಲ್ಪಟ್ಟಿವೆ! ಆದರೆ ಒಳಗೆ ಯಾರೂ ನುಸುಳಿದ ಹಾಗಿಲ್ಲ. ಕಿಟಕಿಯಿಂದ ಟಾರ್ಚ್ ಹಾಕಿ ಹೊರಗೆ ನೋಡಿದರೆ, ಬಾಗಿಲ ಬಳಿ ಗಿರೀಶನೇ ನಿಂತಿದ್ದಾನೆ. ಇಬ್ಬರಿಗೂ ಅತ್ಯಾಶ್ಚರ್ಯ! ಕೂಡಲೇ ದೀಪ ಹಾಕಿ ಬಾಗಿಲು ತೆರೆದರು.

'ಏನಮ್ಮಾ ಇದು ಎಷ್ಟು ಹೊತ್ತಿಂದ ಬಾಗಿಲು ಬಡೀತಾನೇ ಇದ್ದೀನಿ, ಎಚ್ಚರ ಆಗಿಲ್ವಾ?'

'ನೀನು ಯಾವಾಗ ಬಂದೆ ಮಗನೆ, ನಮಗೆ ಗೊತ್ತೇ ಆಗಿಲ್ಲ' ಗಾಯತ್ರಿ ಮಗನನ್ನಪ್ಪಿ ಕಣ್ಣೀರು ಸುರಿಸಿದಳು. ಸದಾನಂದನೂ ಅಷ್ಟೇ 'ಗಿರೀಶಾ, ನೀನು ಹೇಗೆ ಬಂದೆ ಇಷ್ಟು ಹೊತ್ತಲ್ಲಿ? ಬರೋ ವಿಚಾರ ನೀನು ತಿಳಿಸಲೇ ಇಲ್ಲ...'

'ನಾನು ಬರುವಾಗ ಇಲ್ಲಿ ಗೇಟು ತೆರೆದುಕೊಂಡಿತ್ತು. ಟ್ಯಾಕ್ಸಿ ನಿಲ್ಲುವಾಗ ಇಲ್ಲಿಂದ ನಾಲ್ಕು ಜನ ಓಡಿ ಹೋಗುವುದನ್ನು ನೋಡಿದೆ...ಈ ಹೊತ್ತಿನಲ್ಲಿ ಯಾರು ಬಂದುದು ಮನೆಗೆ? ನಿಮ್ಗೇನೂ ಆಗಿಲ್ಲ ತಾನೇ?'

'ದರೋಡೆಕೋರರು ಮಗನೆ, ಬಾಗಿಲು ಒಡೆಯಲು ಪ್ರಯತ್ನಪಟ್ಟರು. ಕಿಟಕಿಯ ಸರಳುಗಳನ್ನು ತುಂಡು ಮಾಡಿದ್ದಾರೆ ನೋಡು. ಇನ್ನೇನು ಒಳಗೆ ಬರ್ತಾ ಇದ್ರು... ಅಷ್ಟರಲ್ಲಿ ನೀನು ಬಂದ ಕಾರಣ ಅವರೆಲ್ಲಾ ಓಡಿಹೋದ್ರು.. ನೀನು ಬರೋದು ಸ್ವಲ್ಪ ತಡ ಆಗಿದ್ರೂ ಏನೇನೋ ಆಗಿಹೋಗ್ತಿತ್ತು.. ನಾವು ಜೀವಂತ ಉಳಿಯುತ್ತಿದ್ವೋ ಇಲ್ವೋ..' ಸದಾನಂದ ಬಡಬಡಿಸಿದ.

'ಇನ್ನು ನಮ್ಮನ್ನು ಬಿಟ್ಟು ಹೋಗ್ಬೇಡ ಮಗ ನೀನು. ನಮಗೆ ಇಲ್ಲಿ ಇರಲು ಭಯವಾಗುತ್ತಿದೆ. ಎಷ್ಟೋ ಹೊತ್ತಿಂದ ನಾವು ಸ್ಟೋರ್ ಕೋಣೆಯಲ್ಲಿ ಅವಿತಿದ್ದೆವು..' ಗಾಯತ್ರಿ ಇನ್ನೂ ಬಿಕ್ಕುತ್ತಲೇ ಇದ್ದಳು.

'ಸಮಾಧಾನ ಮಾಡ್ಕೊ ಅಮ್ಮ. ಇಲ್ಲಿನ ಪರಿಸ್ಥಿತಿ ಎಲ್ಲ ನಂಗೆ ಅರ್ಥ ಆಗತ್ತೆ. ಇನ್ನು ನಿಮ್ಮನ್ನು ಬಿಟ್ಟು ಹೋಗಲು ನನಗೂ ಮನಸ್ಸಿಲ್ಲ. ಅಮ್ಮ, ಎರಡೇ ತಿಂಗಳು ಸಮಯ ಕೊಡು. ಕೆನಡದ ಮನೆಯನ್ನು ಮಾರಿ ಅಲ್ಲಿನ ವ್ಯವಹಾರ ಎಲ್ಲ ಮುಗಿಸಿ, ನಾವಿಬ್ಬರೂ ಇಲ್ಲಿಗೇ ಬರ್ತೀವಿ, ಸರೀನಾ?'

'ಹೂಂ.... ಅದು ಹೇಗೆ ನೀನೀಗ ಬಂದೆ ಇಲ್ಲಿಗೆ, ದೇವರ ಹಾಗೆ....'

'ನನಗೆ ನಾಳೆ ಇಲ್ಲಿ ಒಂದು ಮೀಟಿಂಗಿಗೆ ಹೋಗಲು ಇದೆ. ಕಂಪೆನಿಯೋರೇ ಕಳಿಸಿದ್ದು. ನಿಮ್ಗೆಲ್ಲ ಒಂದು ಸರ್‌ಪ್ರೈಸ್ ಕೊಡೋಣ ಅಂತ ಬರೋ ವಿಷಯ ಗುಟ್ಟಾಗಿಟ್ಟೆ.'

'ಅಬ್ಬಾ! ಸರಿಯಾದ ಸಮಯಕ್ಕೇ ಬಂದೆ ನೀನು.'

ಗಾಯತ್ರಿ ಸದಾನಂದರಿಗೆ ಇದೆಲ್ಲಾ ಕನಸೋ ನನಸೋ ಒಂದೂ ಅರ್ಥ ಆಗುತ್ತಿಲ್ಲ. ತನ್ನ ಮೈಯನ್ನೇ ಚಿವುಟಿಕೊಂಡಳು ಗಾಯತ್ರಿ. ಕನಸಲ್ಲ, ಇದು ನಿಜವೇ. ಕೊಕ್ಕೊಕ್ಕೋ.... ದೂರದಲ್ಲೆಲ್ಲೋ ಮುಂಜಾವಿನ ಕೋಳಿ ಕೂಗಿತು.